District Board Roads (Metalling in Bangalore District).

Q.—173. **Sri A. V. NARASIMHA REDDY** (Bangalore South).—

Will the Government be pleased to state :—

(*a*) the names and length of the District Board roads that are taken up for metalling in Bangalore South Taluk during 1954;

(*b*) the amount sanctioned up to December 1954 for the same ?

A.—**Sri T. CHANNIAH** (Minister for Public Health and Local Self-Government).—

(*a*)—

Sl. No.	Name of the road	Length of the road taken up for metalling	Amount sanctioned up to December 1954
		M. F.	Rs.
1	Bangalore-Mysore Road to Tavarekere *via* Ramohalli	0 3	1,140
2	Yemalur-Panathur Road ...	0 4	1,325
3	Road from Yemalur-Panathur Road to Bangalore-Sarjapur Road *via* Bellandur.	0 3	1,330
4	Road from Bommanahalli to Koppa *via* Begur	0 3	1,370
5	Road deviating from Gottigere Road to Kolamipalya *via* Avalahalli ...	0 6	2,000
6	Sunkenahalli-Hoskerehalli Road ...	0 2	1,000
	Total ...	2 5	8,165

(*b*) *Vide* last column of reply to Clause (*a*).

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರು ದಕ್ಷಿಣ ತಾಲ್ಲೂಕಿನ ನಾಗವಾರಾ—ಕೋರಮಂಗಲ ರಸ್ತೆ ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿದೆಯಲ್ಲವೇ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗಾದರೆ ಈ ಪ್ರಶ್ನೆಯನ್ನು ಇನ್ನೊಂದು ಸಾರಿ ತೆಗೆದು ಕೊಳ್ಳೋಣವೇ ?

ಶ್ರೀ ಟಿ. ಚನ್ನಯ್ಯ.—ನೀವು ಕೇಳಿರುವ ಪ್ರಶ್ನೆಗೆ ಉತ್ತರ ಕೊಟ್ಟಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿರುವ ರಸ್ತೆಗಳು ಯಾವಯಾವವು ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎ. ವಿ. ನರಸಿಂಹರೆಡ್ಡಿ.—ನಾನು ಕೇಳಿರುವ ಪ್ರಶ್ನೆ ಬೆಂಗಳೂರು ದಕ್ಷಿಣ ತಾಲ್ಲೂಕಿನದು ; ಮೆಟಲ್ ಮಾಡುವುದಕ್ಕೆ ಕೇವಲ ಎರಡು ಮೈಲ ಐದು ಫರ್ಲಾಂಗ್ ಮಾತ್ರ ತೆಗೆದುಕೊಂಡಿದ್ದೀರಿ. ಅದಕ್ಕಾಗಿ ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಎಲ್ಲಾ ರಸ್ತೆಗಳ ವಿಚಾರವನ್ನೂ ಕೇಳಿದರೆ ಹೇಳುವುದು ಕಷ್ಟ. ಅದಕ್ಕೇ ನೋಟೀಸ್ ಬೇಕೆಂದು ಹೇಳುತ್ತಾರೆ ; ಮೊದಲೇ ನೀವು ಇವುಗಳನ್ನು ಕೇಳಬಹುದಾಗಿತ್ತು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೇಗೂರು ಮಾರ್ಗವಾಗಿ ಕೊಪ್ಪಕ್ಕೆ ಹೋಗುವ ರಸ್ತೆಯಲ್ಲ ಮೂರು ಫರ್ಲಾಂಗ್ ಭಾಗವನ್ನು ತೆಗೆದುಕೊಂಡಿರುವುದಾಗಿ ಹೇಳಿದ್ದೀರಿ. ಈ ರಸ್ತೆ ಒಟ್ಟು ಎಷ್ಟು ಉದ್ದವಿದೆಯೆಂದು ಹೇಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಮಾಡಿಸಿರತಕ್ಕ ಭಾಗ ಮೂರು ಫರ್ಲಾಂಗ್ ಇದೆಯೆಂದು ಗೊತ್ತಾಗಿದೆ. ರಸ್ತೆಯ ಉದ್ದ ಎಷ್ಟು ಎಂಬುದು ಗೊತ್ತಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ನಮ್ಮಾರು ಆರು ಮೈಲಿಯಷ್ಟಿದೆಯಲ್ಲವೇ ?

ಶ್ರೀ ಟಿ. ಚನ್ನಯ್ಯ.—ಗೊತ್ತಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಸರ್ಕಾರದವರು ಈ ರಸ್ತೆಯಲ್ಲ ಓಡಿಸಲು ಒಂದು ಬಸ್ಸಿಗೆ ಪರ್ಮಿಟ್ ಕೊಟ್ಟಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎ. ವಿ. ನರಸಿಂಹರೆಡ್ಡಿ.—ಕೇವಲ ಮೂರು-ನಾಲ್ಕು ಫರ್ಲಾಂಗಿನಷ್ಟನ್ನು ಮೆಟಲ್ ಮಾಡಿ, ಇನ್ನೂ ಪೂರೈಸಿಲ್ಲ, ಆಗಲೇ ಇದರಮೇಲೆ ಓಡಿಸುವುದಕ್ಕೆ ಒಂದು ಬಸ್ಸಿಗೆ ಪರ್ಮಿಟ್ ಕೊಟ್ಟಿದ್ದೀರಲ್ಲಾ ! ಡಿಸ್ಟ್ರಿಕ್ಟ್ ಬೋರ್ಡಿನವರು ಬೇಗ ಮೆಟಲ್ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಪ್ರತಿವರ್ಷವೂ ಎಷ್ಟು ಮೆಟಲ್ ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನು ತೆಗೆದು ಕೊಂಡು ಮಾಡುತ್ತಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಮೂರು ಫರ್ಲಾಂಗ್ ಮೆಟಲ್ ಮಾಡಿಸಲು 1,370 ರೂಪಾಯಿಗಳು ಖರ್ಚಾಗುತ್ತವೆಯೇ ?

ಶ್ರೀ ಟಿ. ಚನ್ನಯ್ಯ.—ಅಷ್ಟು ಖರ್ಚಾಗುತ್ತದೆಂದು ವರದಿ ಮಾಡಿದ್ದಾರೆ.

ಶ್ರೀ ಎ. ಪಿ ನರಸಿಂಹರೆಡ್ಡಿ.—ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಒಂದು ಮೈಲಿಗೆ ಇಷ್ಟೇ ಖರ್ಚು ಮಾಡ ಬೇಕೆಂದಿದೆಯಲ್ಲವೇ ?

ಶ್ರೀ ಟಿ. ಚನ್ನಯ್ಯ.—ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆ ಗಳನ್ನು ಒಂದು ಫರ್ಲಾಂಗಿಗೆ ಇನ್ನೂರು ರೂಪಾಯಿ ಪ್ರಕಾರ ಕೊಡುತ್ತಾರೆ.

ಶ್ರೀ ಎ. ಪಿ. ನರಸಿಂಹರೆಡ್ಡಿ.—ಹಾಗಾದರೆ ಇಲ್ಲಿ ಕೊಟ್ಟಿರುವ ಲೆಕ್ಕ ಸರಿಯೇ ? 1,370 ರೂಪಾಯಿ ಗಳು ಖರ್ಚಾಗಿವೆಯೆಂದು ಹೇಳಿದೆಯಲ್ಲಾ ?

ಶ್ರೀ ಟಿ. ಚನ್ನಯ್ಯ.—ಅದು ಸಂಬಂಧಪಟ್ಟ ರಸ್ತೆ ಯಾವ ರೀತಿಯಿದೆ, ಎಂಬುದನ್ನು ಅವಲಂಬಿಸಿರುತ್ತದೆ.

ಶ್ರೀ ಎ. ಪಿ. ನರಸಿಂಹರೆಡ್ಡಿ.—ದಯವಿಟ್ಟು ನೋಡಿ, ಈ ರಸ್ತೆಗೆ ಸಂಬಂಧಪಟ್ಟಂತೆ ದುರಸ್ತಿಗೆ ಹಣ ಒದ ಗಿಸಿದ್ದೀರಾ ? ಅಥವಾ ತಪ್ಪು ಲೆಖ್ಖ ಕೊಟ್ಟಿದೆಯೇ ಹೇಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ವಿಚಾರಿಸಿ ಹೇಳುತ್ತೇನೆ.

ಶ್ರೀ ಎಸ್. ಸಿದ್ದಪ್ಪ.—ಮೂರು ಫರ್ಲಾಂಗಿಗೆ 1,370 ರೂಪಾಯಿಗಳಾಗಿವೆಯೆಂದು ಮಾನ್ಯ ಸ್ನೇಹಿ ತರು ಹೇಳಿದರು, ಮೂರು ಫರ್ಲಾಂಗಿಗೆ ಜಮಾವಣೆ ಯಾಗಿರುವುದು ಕೇವಲ 450 ರೂಪಾಯಿಗಳಲ್ಲವೇ ?

ಅಧ್ಯಕ್ಷರು.—ಗಜಕ್ಕೆ ಎಷ್ಟು ರೂಪಾಯಿಗಳಾಗುತ್ತ ವೆಂದು ಹೇಳಿ ಲೆಕ್ಕದ ಪ್ರಕಾರ ಕೊಟ್ಟಿದ್ದಾರೆ.

ಶ್ರೀ ಬಿ. ರಾಚಯ್ಯ.—ಡಿಸ್ಟ್ರಿಕ್ಟ್ ಬೋರ್ಡಿನಿಂದ maintain ಆಗತಕ್ಕ ರಸ್ತೆಗಳಿಗೆ ಒಂದು ಮೈಲಿಗೆ 200-300 ರೂಪಾಯಿಗಳನ್ನು ಕೊಡುತ್ತಿರುವುದು ಸಾಕಾಗುವುದಿಲ್ಲವೆಂದು ಗೊತ್ತಿದೆಯೇ ?

ಶ್ರೀ ಟಿ. ಚನ್ನಯ್ಯ.—ಆಯಾ ರಸ್ತೆಗೆ annual maintenanceಗೆ ಎಷ್ಟು ಕೊಡಬೇಕೆಂದು ನಿಗದಿ ಮಾಡಲಾಗಿದೆಯೋ ಅದರ ಪ್ರಕಾರ allot ಮಾಡು ತ್ತಾರೆ.

ಶ್ರೀ ಬಿ. ರಾಚಯ್ಯ.—Annual maintenanceಗೆ ತಾವು ಕೊಡುತ್ತಿರುವುದು ಗುಳಿಗಳನ್ನು ಮುಚ್ಚುವು ದಕ್ಕೂ ಕೂಡ ಸಾಕಾಗುವುದಿಲ್ಲ. ಆದ್ದರಿಂದ ಹೆಚ್ಚಿಗೆ ಕೊಡುತ್ತೀರಾ ?

(No answer)

ಶ್ರೀ ಬಿ. ಟಿ. ಕೆಂಪರಾಜ್.—ಬೆಂಗಳೂರು-ಮೈಸೂರು ರಸ್ತೆಯಿಂದ ರಾಮೋಹಳ್ಳಿಯ ಮೂಲಕ ತಾವರೆಕೆರೆಗೆ ಹೋಗುವ ಮಾರ್ಗ ಎಷ್ಟು ಉದ್ದವಿದೆ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಬಿ. ಟಿ. ಕೆಂಪರಾಜ್.—ಈ ರಸ್ತೆಗಳನ್ನು ಪ್ರಾರಂಭಮಾಡುವ ಮೊದಲು ಎಷ್ಟು ಉದ್ದವಿದೆ, ಎಷ್ಟು ಖರ್ಚಾಗುತ್ತದೆ ಎಂಬುದನ್ನು ತಿಳಿದುಕೊಂಡು ತಾನೇ ತಾವು ಪುರುವಾಡುವುದು ?

ಅಧ್ಯಕ್ಷರು.—ನಿಮಗೆ ಗೊತ್ತಿದ್ದರೆ ಹೇಳಬಹುದು.

ಶ್ರೀ ಬಿ. ಟಿ. ಕೆಂಪರಾಜ್.—ತಾವು ಎಸ್ಟಿಮೇಟನ್ನು ಸ್ಯಾಂಕ್ಷನ್ ಮಾಡುವಾಗ ರಸ್ತೆಗೆ ಎಷ್ಟು ಹಣಬೇಕು, ಎಷ್ಟು ವರ್ಷದಲ್ಲಿ ಪೂರೈಸಬಹುದು ಎಂಬುದನ್ನು ನೋಡಿಕೊಂಡು ತಾನೇ ಸ್ಯಾಂಕ್ಷನ್ ಮಾಡುವುದು ?

ಶ್ರೀ ಟಿ. ಚನ್ನಯ್ಯ.—ರಸ್ತೆಯ ಯಾವಭಾಗವನ್ನು ರಿಪೇರಿ ಮಾಡುವ ಅವಶ್ಯಕತೆಯಿದೆ ಎಂಬುದನ್ನು ತಿಳಿದು ಆಯಾ ಭಾಗಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊರೆಡು ಅಂದಾಜು ತಯಾರು ಮಾಡುತ್ತಾರೆಯೇ ಏನಾ ಪೂರ್ತ ರಸ್ತೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ.

ಶ್ರೀ ಬಿ. ಟಿ. ಕೆಂಪರಾಜ್.—ಮಧ್ಯೆ ಮಧ್ಯೆ ಎಲ್ಲೆಲ್ಲಿ ರಿಪೇರಿಯಾಗಬೇಕಾಗಿದೆಯೋ ಅಷ್ಟು ಮಾತ್ರ ನೋಡಿ ಅದಕ್ಕೆ ಮಾತ್ರ ಎಸ್ಟಿಮೇಟ್ ಮಂಜೂರು ಮಾಡು ತ್ತೀರಾ ?

ಅಧ್ಯಕ್ಷರು.—ಮಂಜೂರು ಮಾಡತಕ್ಕ ಅಧಿಕಾರಿ ಡೆಪ್ಯುಟಿ ಕಮೊಷನರು. ಆದ್ದರಿಂದ ನೀವು ಕೇಳಿರು ವಷ್ಟಕ್ಕೆ ಮಾತ್ರ information ತರಿಸಿಕೊಡಬಲ್ಲರು. ನೀವು ಮೊದಲು ಕೇಳುವಾಗಲೇ ಬೇರೆ information ಏನಾದರೂ ಕೇಳಿದ್ದರೆ ತರಿಸಿಕೊಡುತ್ತಿದ್ದರು.

ಶ್ರೀ ಬಿ. ಟಿ. ಕೆಂಪರಾಜ್.—ಡೆಪ್ಯುಟಿ ಕಮೊಷನರು ಯಾವ ರೀತಿ ಕೆಳಗಿನ ಅಧಿಕಾರಿಗಳು ಶಿಫಾರಸು ಮಾಡುತ್ತಾರೋ, ಆ ರೀತಿ sanction ಮಾಡು ತ್ತಾರೋ ಅಥವಾ ರಸ್ತೆಗೆ ಎಷ್ಟು ಬೇಕಾಗಬಹುದು, ಎಷ್ಟು ವರ್ಷದಲ್ಲಿ ಪೂರೈಸಬಹುದು ಎಂಬುದನ್ನೆಲ್ಲಾ ನಿಗದಿಮಾಡಿಕೊಂಡು sanction ಮಾಡುತ್ತಾರೋ?

ಶ್ರೀ ಟಿ. ಚನ್ನಯ್ಯ.—ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೊಷನರು ಸಂಬಂಧಪಟ್ಟ ರಸ್ತೆಗೆ ಎಷ್ಟು ಖರ್ಚಾಗ ಬೇಕೆಂದು ಎಸ್ಟಿಮೇಟ್ ತಯಾರುಮಾಡಿಸಿ ಮಂಜೂ ರಾತಿ ಕೊಡುತ್ತಾರೆ.

ಶ್ರೀ ಬಿ. ಟಿ. ಕೆಂಪರಾಜ್.—ರಾಮೋಹಳ್ಳಿ ರಸ್ತೆ 3 ಫರ್ಲಾಂಗ್ ತನಕ ಮಾತ್ರಆಗಿದೆ. ಉಳಿದ ಭಾಗ ವನ್ನೂ ರಿಪೇರಿ ಮಾಡುವ ಅವಶ್ಯಕತೆಯಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಅವಶ್ಯಕತೆಯಿದ್ದರೆ ಮಾಡ ಲಾಗುವುದು.

ಶ್ರೀ ಬಿ. ಟಿ. ಕೆಂಪರಾಜ್.—ಇನ್ನು ಮೇಲಾದರೂ ಒಂದೊಂದು ರಸ್ತೆಗೆ ಎಷ್ಟು ಹಣ ರಿಪೇರಿಗೆ ಬೇಕಾಗು ತ್ತದೆಂಬುದನ್ನು ನೋಡಿಕೊಂಡು ಪೂರ್ತಾ ರಸ್ತೆಯನ್ನು ರಿಪೇರಿಮಾಡಿಸುವುದಕ್ಕೆ ಏರ್ಪಾಡುಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಅವಶ್ಯಕತೆಗಳಿಗನುಸಾರವಾಗಿ ಆಯಾ ರಸ್ತೆಯ ಕೆಲಸ ತೆಗೆದುಕೊಳ್ಳಲಾಗುತ್ತದೆ. ಪೂರ್ತಾ ರಸ್ತೆಯನ್ನು ತೆಗೆದುಕೊಳ್ಳುವುದಕ್ಕಾಗುವು ದಿಲ್ಲ.

Road to Bylanarasapura.

Q.—488. **Sri H. T. PUTTAPPA** (Hoskote-Anekal—Scheduled Castes).—

Will the Government be pleased to state :—

whether they intend to construct a road fit for bus traffic to Bylanarasapura Village in Hoskote Taluk, which consists of a population of about 3,000?

A.—**Sri T. CHANNIAH** (Minister for Public Health and Local Self-Government).—

The formation of such roads is now the responsibility of the District Boards. The District Board, Bangalore, has been unable to take up the work of formation of a road from Banamakanahalli to Bylanarasapura, as neither the Village Panchayets concerned nor the people of the village are willing to contribute any share of the cost.